# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:18-02-2021 ರ ನಡವಳಿಗಳು

**ವಿಷಯದ ಸಂಖ್ಯೆ: 680 /2020-21**

**ಪ್ರಸ್ತಾವನೆ :**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ 97, ದಯಾನಂದ ವ್ಯಾಪ್ತಿಯಲ್ಲಿರುವ ಶ್ರೀ ರಾಮಪುರ 5ನೇ ಅಡ್ಡರಸ್ತೆಗೆ "ಭಗವಾನ್ ಮಹಾವೀರ್ ರಸ್ತೆ" ಎಂದು ನಾಮಕರಣ ಮಾಡುವುದೆಂದು ಪಾಲಿಕೆಯು ದಿನಾಂಕ:29-06-2017 ರಂದು ವಿಷಯ ಸಂಖ್ಯೆ: 90/2017-18 ರಲ್ಲಿ ಕೈಗೊಂಡಿರುವ ನಿರ್ಣಯವನ್ನು ರದ್ದುಪಡಿಸಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ಈ ಸಂಬಂಧ ಸರ್ಕಾರವು ದಿನಾಂಕ:01-01-2021 ರಂದು ನಗರ ಪಾಲಿಕೆಗೆ ಕಾರಣ ಕೇಳುವ ನೋಟಿಸ್ ಜಾರಿ ಮಾಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನಾಮಕರಣ ಸಂಬಂಧ ದಿನಾಂಕ:29-06-2017 ರಂದು ವಿಷಯ ಸಂಖ್ಯೆ: 90/2017-18 ರಲ್ಲಿ ಕೈಗೊಂಡಿರುವ ನಿರ್ಣಯವು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ (ಸಾರ್ವಜನಿಕ ಸ್ಥಳಕ್ಕೆ ನಾಮಕರಣ ಮಾಡುವುದು) ನಿಯಮಗಳು 2008 ರ ನಿಯಮ 7ರ ಉಲ್ಲಂಘನೆಯಾಗಿರುತ್ತದೆ. ಆದುದರಿಂದ ಸದರಿ ನಿರ್ಣಯವನ್ನು ಏಕೆ ರದ್ದುಪಡಿಸಬಾರದು ಎಂಬ ಬಗ್ಗೆ ಕೆ.ಎಂ.ಸಿ ಕಾಯ್ದೆ ಕಲಂ 98(2) ರನ್ವಯ ಈ ನೋಟೀಸ್ ಜಾರಿ ಮಾಡಿದ್ದು, ಈ ಸಂಬಂಧ ಆಕ್ಷೇಪಣೆಗಳಿದ್ದಲ್ಲಿ ಈ ನೋಟಿಸ್ ತಲುಪಿದ ದಿನಾಂಕದಿಂದ 15 ದಿನಗಳೊಳಗಾಗಿ ಲಿಖಿತ ಹೇಳಿಕೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಗಿದೆ. ನಿಗಧಿತ ಸಮಯದೊಳಗೆ ಯಾವುದೇ ಹೇಳಿಕೆ ಬಾರದಿದ್ದಲ್ಲಿ ನಿಯಮಾನುಸಾರ ಏಕಪಕ್ಷೀಯವಾಗಿ ನಿರ್ಣಯವನ್ನು ರದ್ದುಗೊಳಿಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ.

ಆದುದರಿಂದ ದಿನಾಂಕ:01-01-2021 ರ ಕಾರಣ ಕೇಳುವ ನೋಟಿಸ್ ಸಂಬಂಧ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:15-01-2021 ರ ಟಿಪ್ಪಣಿ.

**ತೀರ್ಮಾನ :** **ಪ್ರಸ್ತಾವನೆಯನ್ನು ಅವಲೋಕಿಸಲಾಗಿದ್ದು, ದಿನಾಂಕ:29-06-2017 ರಂದು ಕೌನ್ಸಿಲ್ ಸಭೆಯು ನಾಮಕರಣ ಸಂಬಂಧ ತೆಗೆದುಕೊಂಡಿರುವ ನಿರ್ಣಯವನ್ನು ರದ್ದುಪಡಿಸುವ ಬಗ್ಗೆ ಆಯುಕ್ತರು ದಿನಾಂಕ:13-09-2017 ರಂದು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಒಪ್ಪಿದೆ.**

(ಗೌರವ ಗುಪ್ತ)
ಆಡಳಿತಗಾರರು

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:18-02-2021 ರ ನಡವಳಿಗಳು

**ವಿಷಯದ ಸಂಖ್ಯೆ: 681 /2020-21**

**ಪ್ರಸ್ತಾವನೆ :**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ : 41 ಪೀಣ್ಯ ಕೈಗಾರಿಕಾ ಪ್ರದೇಶ ವ್ಯಾಪ್ತಿಯ ಇಂಡಿಯನ್ ಬೇಕರಿಯಿಂದ ಹೈ ಟೆನ್‌ಷನ್‌ವರೆಗೆ ಚಾಮುಂಡಿಪುರಕ್ಕೆ ಹಾದು ಹೋಗುವ ರಸ್ತೆಗೆ "ಶಂಕರ್‌ನಾಗ್ ರಸ್ತೆ" ಎಂದು ನಾಮಕರಣ ಮಾಡಲು ಪಾಲಿಕೆಯು ದಿನಾಂಕ:27-12-2018 ರಂದು ವಿಷಯ ಸಂಖ್ಯೆ: 221/2018-19 ರಲ್ಲಿ ಕೈಗೊಂಡಿರುವ ನಿರ್ಣಯವನ್ನು ರದ್ದುಪಡಿಸಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ಈ ಸಂಬಂಧ ಸರ್ಕಾರವು ದಿನಾಂಕ:01-01-2021 ರಂದು ನಗರ ಪಾಲಿಕೆಗೆ ಕಾರಣ ಕೇಳುವ ನೋಟಿಸ್ ಜಾರಿ ಮಾಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನಾಮಕರಣ ಸಂಬಂಧ ದಿನಾಂಕ:27-12-2018 ರಂದು ವಿಷಯ ಸಂಖ್ಯೆ: 221/2018-19 ರಲ್ಲಿ ಕೈಗೊಂಡಿರುವ ನಿರ್ಣಯವು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ (ಸಾರ್ವಜನಿಕ ಸ್ಥಳಕ್ಕೆ ನಾಮಕರಣ ಮಾಡುವುದು) ನಿಯಮಗಳು 2008 ರ ನಿಯಮ 7ರ ಉಲ್ಲಂಘನೆಯಾಗಿರುತ್ತದೆ. ಆದುದರಿಂದ ಸದರಿ ನಿರ್ಣಯವನ್ನು ಏಕೆ ರದ್ದುಪಡಿಸಬಾರದು ಎಂಬ ಬಗ್ಗೆ ಕೆ.ಎಂ.ಸಿ ಕಾಯ್ದೆ ಕಲಂ 98(2) ರನ್ವಯ ಈ ನೋಟೀಸ್ ಜಾರಿ ಮಾಡಿದ್ದು, ಈ ಸಂಬಂಧ ಆಕ್ಷೇಪಣೆಗಳಿದ್ದಲ್ಲಿ ಈ ನೋಟಿಸ್ ತಲುಪಿದ ದಿನಾಂಕದಿಂದ 15 ದಿನಗಳೊಳಗಾಗಿ ಲಿಖಿತ ಹೇಳಿಕೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಗಿದೆ. ನಿಗದಿತ ಸಮಯದೊಳಗೆ ಯಾವುದೇ ಹೇಳಿಕೆ ಬಾರದಿದ್ದಲ್ಲಿ ನಿಯಮಾನುಸಾರ ಏಕಪಕ್ಷೀಯವಾಗಿ ನಿರ್ಣಯವನ್ನು ರದ್ದುಗೊಳಿಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ.

ಆದುದರಿಂದ, ದಿನಾಂಕ:01-01-2021 ರ ಕಾರಣ ಕೇಳುವ ನೋಟಿಸ್ ಸಂಬಂಧ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:15-01-2021 ರ ಟಿಪ್ಪಣಿ.

**ತೀರ್ಮಾನ :** **ಪ್ರಸ್ತಾವನೆಯನ್ನು ಅವಲೋಕಿಸಲಾಗಿದ್ದು, ದಿನಾಂಕ:27-12-2018 ರಂದು ಕೌನ್ಸಿಲ್ ಸಭೆಯು ನಾಮಕರಣ ಸಂಬಂಧ ತೆಗೆದುಕೊಂಡಿರುವ ನಿರ್ಣಯವನ್ನು ರದ್ದುಪಡಿಸುವ ಬಗ್ಗೆ ಆಯುಕ್ತರು ದಿನಾಂಕ:31-01-2019 ರಂದು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಒಪ್ಪಿದೆ.**

(ಗೌರವ ಗುಪ್ತ)
ಆಡಳಿತಗಾರರು

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:18-02-2021 ರ ನಡವಳಿಗಳು

**ವಿಷಯದ ಸಂಖ್ಯೆ: 684 /2020-21**

**ಪ್ರಸ್ತಾವನೆ :**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಾಗಡಿ ಮುಖ್ಯ ರಸ್ತೆ ಶ್ರೀಗಂಧದ ಕಾವಲ್‌ನಿಂದ ಪ್ರಾರಂಭವಾಗಿ ಮರಿಯಪ್ಪನಪಾಳ್ಯ ಮಾರ್ಗವಾಗಿ ಕೆಂಗೇರಿ ಉಪನಗರ ಹೊರವರ್ತುಲ ರಸ್ತೆ (ರಿಂಗ್ ರಸ್ತೆ) ಮೂಲಕ ಮೈಸೂರು ಮುಖ್ಯ ರಸ್ತೆಗೆ ಸೇರುವ ರಸ್ತೆಗೆ "ಶ್ರೀ.ಕೆ.ಹೆಚ್.ರಾಮಯ್ಯ ರಸ್ತೆ" ಎಂದು ನಾಮಕರಣ ಮಾಡುವುದೆಂದು ದಿನಾಂಕ:12-06-2020ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:04(73)2020-21 ರಲ್ಲಿ ಏಕಪಕ್ಷೀಯವಾಗಿ ನಿರ್ಣಯಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಗಳು : ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:18-08-2020 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ ದಿನಾಂಕದಿಂದ 30 ದಿನಗಳ ಒಳಗಾಗಿ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶವಿದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಿರುವುದಿಲ್ಲ.

ಈ ಸಂಬಂಧ ಪರಿಶೀಲಿಸಲಾಗಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮಾಗಡಿ ರಸ್ತೆಯ ಒಕ್ಕಲಿಗರ ಸಂಘ ಶಾಲೆಯಿಂದ ಜ್ಞಾನಜ್ಯೋತಿನಗರ-ಬೆಂಗಳೂರು ವಿಶ್ವವಿದ್ಯಾಲಯದ ಸಿಗ್ನಲ್ ವೃತ್ತದವರೆಗೆ "ನಟ ಜಾಣಕ್ಯ ಮುಸುರಿ ಕೃಷ್ಣಮೂರ್ತಿ ರಸ್ತೆ" ಎಂದು ನಾಮಕರಣ ಮಾಡಲು ದಿನಾಂಕ:30-09-2015ರ ಪತ್ರ ಸಂಖ್ಯೆ: ನಅಇ 171 ಎಂಎನ್‌ಜಿ 2015 ರಲ್ಲಿ ಸರ್ಕಾರದ ಅನುಮೋದನೆ ನೀಡಿರುತ್ತದೆ.

ಮೇಲಿನ ಹಿನ್ನಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಮಾಗಡಿ ಮುಖ್ಯ ರಸ್ತೆ ಶ್ರೀಗಂಧದ ಕಾವಲ್‌ನಿಂದ ಪ್ರಾರಂಭವಾಗಿ ಮರಿಯಪ್ಪನಪಾಳ್ಯ ಮಾರ್ಗವಾಗಿ ಕೆಂಗೇರಿ ಉಪನಗರ ಹೊರವರ್ತುಲ ರಸ್ತೆ (ರಿಂಗ್ ರಸ್ತೆ) ಮೂಲಕ ಮೈಸೂರು ಮುಖ್ಯ ರಸ್ತೆಗೆ ಸೇರುವ ರಸ್ತೆಗೆ "ಶ್ರೀ.ಕೆ.ಹೆಚ್.ರಾಮಯ್ಯ ರಸ್ತೆ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ನಿರ್ಣಯ ಕೈಗೊಳ್ಳುವ ಸಂಬಂಧ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:15-01-2021 ರ ಟಿಪ್ಪಣಿ.

**ತೀರ್ಮಾನ :** **ಆಯುಕ್ತರವರ ದಿನಾಂಕ:15-01-2021 ರ ಟಿಪ್ಪಣಿ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.**

**(ಗೌರವ ಗುಪ್ತ)**
**ಆಡಳಿತಗಾರರು**

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:18-02-2021 ರ ನಡವಳಿಗಳು

**ವಿಷಯದ ಸಂಖ್ಯೆ: 679 /2020-21**

**ಪ್ರಸ್ತಾವನೆ :**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:44ರ ವ್ಯಾಪ್ತಿಯಲ್ಲಿರುವ ಶ್ರೀಕಂಠೇಶ್ವರನಗರದ 5ನೇ ಮುಖ್ಯ ರಸ್ತೆಗೆ "ಸ್ವಾಮಿ ವಿವೇಕಾನಂದ ರಸ್ತೆ" ಎಂಬುದಾಗಿ ನಾಮಕರಣ ಮಾಡಲು ಪಾಲಿಕೆಯು ದಿನಾಂಕ:30-08-2017 ರಂದು ವಿಷಯ ಸಂಖ್ಯೆ:07(177)/2017-18 ರಲ್ಲಿ ಕೈಗೊಂಡಿರುವ ನಿರ್ಣಯವನ್ನು ರದ್ದುಪಡಿಸಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ಈ ಸಂಬಂಧ ಸರ್ಕಾರವು ದಿನಾಂಕ:01-01-2021 ರಂದು ನಗರ ಪಾಲಿಕೆಗೆ ಕಾರಣ ಕೇಳುವ ನೋಟಿಸ್ ಜಾರಿ ಮಾಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನಾಮಕರಣ ಸಂಬಂಧ ದಿನಾಂಕ:30-08-2017 ರಂದು ವಿಷಯ ಸಂಖ್ಯೆ:07(177)/2017-18 ರಲ್ಲಿ ಕೈಗೊಂಡಿರುವ ನಿರ್ಣಯವು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ (ಸಾರ್ವಜನಿಕ ಸ್ಥಳಕ್ಕೆ ನಾಮಕರಣ ಮಾಡುವುದು) ನಿಯಮಗಳು 2008ರ ನಿಯಮ 7ರ ಉಲ್ಲಂಘನೆಯಾಗಿರುತ್ತದೆ. ಆದುದರಿಂದ ಸದರಿ ನಿರ್ಣಯವನ್ನು ಏಕೆ ರದ್ದುಪಡಿಸಬಾರದು ಎಂಬ ಬಗ್ಗೆ ಕೆ.ಎಂ.ಸಿ ಕಾಯ್ದೆ ಕಲಂ 98(2) ರನ್ವಯ ಈ ನೋಟಿಸ್ ಜಾರಿ ಮಾಡಿದ್ದು, ಈ ಸಂಬಂಧ ಆಕ್ಷೇಪಣೆಗಳಿದ್ದಲ್ಲಿ ಈ ನೋಟಿಸ್ ತಲುಪಿದ ದಿನಾಂಕದಿಂದ 15 ದಿನಗಳೊಳಗಾಗಿ ಲಿಖಿತ ಹೇಳಿಕೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಗಿದೆ. ನಿಗಧಿತ ಸಮಯದೊಳಗೆ ಯಾವುದೇ ಹೇಳಿಕೆ ಬಾರದಿದ್ದಲ್ಲಿ ನಿಯಮಾನುಸಾರ ಏಕಪಕ್ಷೀಯವಾಗಿ ನಿರ್ಣಯವನ್ನು ರದ್ದುಗೊಳಿಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ.

ಆದುದರಿಂದ ದಿನಾಂಕ:01-01-2021 ರ ಕಾರಣ ಕೇಳುವ ನೋಟಿಸ್ ಸಂಬಂಧ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:15-01-2021 ರ ಟಿಪ್ಪಣಿ.

**ತೀರ್ಮಾನ :** **ಪ್ರಸ್ತಾವನೆಯನ್ನು ಅವಲೋಕಿಸಲಾಗಿದ್ದು, ದಿನಾಂಕ:30-08-2017 ರಂದು ಕೌನ್ಸಿಲ್ ಸಭೆಯು ನಾಮಕರಣ ಸಂಬಂಧ ತೆಗೆದುಕೊಂಡಿರುವ ನಿರ್ಣಯವನ್ನು ರದ್ದುಪಡಿಸುವ ಬಗ್ಗೆ ಆಯುಕ್ತರು ದಿನಾಂಕ:12-10-2017 ರಂದು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಒಪ್ಪಿದೆ.**

(ಗೌರವ ಗುಪ್ತ)
ಆಡಳಿತಗಾರರು

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:18-02-2021 ರ ನಡವಳಿಗಳು**

**ವಿಷಯದ ಸಂಖ್ಯೆ: 682 /2020-21**

**ಪ್ರಸ್ತಾವನೆ :**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:25 ಹೊರಮಾವು ವಾರ್ಡ್ ವ್ಯಾಪ್ತಿಯಲ್ಲಿರುವ ವಡ್ಡರಪಾಳ್ಯ ಗ್ರಾಮಕ್ಕೆ "ಕಾವೇರಿ ನಗರ" ಎಂಬುದಾಗಿ ನಾಮಕರಣ ಮಾಡಲು ಪಾಲಿಕೆಯು ದಿನಾಂಕ:28-02-2017 ರಂದು ವಿಷಯ ಸಂಖ್ಯೆ:350/2016-17 ರಲ್ಲಿ ಕೈಗೊಂಡಿರುವ ನಿರ್ಣಯವನ್ನು ರದ್ದುಪಡಿಸಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ಈ ಸಂಬಂಧ ಸರ್ಕಾರವು ದಿನಾಂಕ:01-01-2021 ರಂದು ನಗರ ಪಾಲಿಕೆಗೆ ಕಾರಣ ಕೇಳುವ ನೋಟಿಸ್ ಜಾರಿ ಮಾಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನಾಮಕರಣ ಸಂಬಂಧ ದಿನಾಂಕ:28-02-2017 ರಂದು ವಿಷಯ ಸಂಖ್ಯೆ:350/2016-17 ರಲ್ಲಿ ಕೈಗೊಂಡಿರುವ ನಿರ್ಣಯವು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ (ಸಾರ್ವಜನಿಕ ಸ್ಥಳಕ್ಕೆ ನಾಮಕರಣ ಮಾಡುವುದು) ನಿಯಮಗಳು 2008 ರ ನಿಯಮ 7ರ ಉಲ್ಲಂಘನೆಯಾಗಿರುತ್ತದೆ. ಆದುದರಿಂದ ಸದರಿ ನಿರ್ಣಯವನ್ನು ಏಕೆ ರದ್ದುಪಡಿಸಬಾರದು ಎಂಬ ಬಗ್ಗೆ ಕೆ.ಎಂ.ಸಿ ಕಾಯ್ದೆ ಕಲಂ 98 (2) ರನ್ವಯ ಈ ನೋಟೀಸ್ ಜಾರಿ ಮಾಡಿದ್ದು, ಈ ಸಂಬಂಧ ಆಕ್ಷೇಪಣೆಗಳಿದ್ದಲ್ಲಿ ಈ ನೋಟಿಸ್ ತಲುಪಿದ ದಿನಾಂಕದಿಂದ 15 ದಿನಗಳೊಳಗಾಗಿ ಲಿಖಿತ ಹೇಳಿಕೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಗಿದೆ. ನಿಗದಿತ ಸಮಯದೊಳಗೆ ಯಾವುದೇ ಹೇಳಿಕೆ ಬಾರದಿದ್ದಲ್ಲಿ ನಿಯಮಾನುಸಾರ ಏಕಪಕ್ಷೀಯವಾಗಿ ನಿರ್ಣಯವನ್ನು ರದ್ದುಗೊಳಿಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ.

ಆದುದರಿಂದ, ದಿನಾಂಕ:01-01-2021 ರ ಕಾರಣ ಕೇಳುವ ನೋಟಿಸ್ ಸಂಬಂಧ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:15-01-2021 ರ ಟಿಪ್ಪಣಿ.

**ತೀರ್ಮಾನ :** **ಪ್ರಸ್ತಾವನೆಯನ್ನು ಅವಲೋಕಿಸಲಾಗಿದ್ದು, ದಿನಾಂಕ:28-02-2017 ರಂದು ಕೌನ್ಸಿಲ್ ಸಭೆಯು ನಾಮಕರಣ ಸಂಬಂಧ ತೆಗೆದುಕೊಂಡಿರುವ ನಿರ್ಣಯವನ್ನು ರದ್ದುಪಡಿಸುವ ಬಗ್ಗೆ ಆಯುಕ್ತರು ದಿನಾಂಕ:23-06-2017 ರಂದು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಒಪ್ಪಿದೆ.**

(ಗೌರವ ಗುಪ್ತ)
ಆಡಳಿತಗಾರರು